ತಲುಪಿದ ಮೇಲೆ ಫೋನ್ ಮಾಡ್ತೀನಿ' ಎಂದು ನನ್ನ ಉತ್ತರಕ್ಕೂ ಕಾಯದೆ ಫೋನ್ ಇಟ್ಟಿದ್ದ. ಅದೇ ಸಮಯಕ್ಕೆ ಸಿಂಧೂ ಮೆನನ್ ರೆಡಿಯಾಗಿ ಬಂದಿದ್ದವಳು 'ಹೊರಡೋಣವ? ಫ್ಲೈಟ್ ಯಾವ ಕಾರಣಕ್ಕೂ ಮಿಸ್ ಆಗಬಾರದಲ್ಲ' ಎಂದಿದ್ದಳು. ನಾನು ಯಾವ ಮಾತನ್ನೂ ಆಡದೆ ಅವಳನ್ನು ಹಿಂಬಾಲಿಸಿದ್ದೆ!

## ಕಳೆದ ಸಂಚಿಕೆಯಲ್ಲಿ



ದೆಹಲಿಯಲ್ಲಿ ರಾಘವ ರೆಡ್ಡಿಯನ್ನು ಭೇಟಿಯಾದ ಕ್ರಾಂತಿ ರೆಡ್ಡಿಗೆ ವಿಭಿನ್ನ ವ್ಯಕ್ತಿತ್ವಗಳು ಎದುರಾದವು. ಸಿಬಿಐನಲ್ಲಿದ್ದ ತನ್ನ ಅಣ್ಣನ ನೆರವನ್ನು ಪಡೆಯಲು ರಾಘವ ರೆಡ್ಡಿ ಮತ್ತು ಆತನ ಗೆಳೆಯರು ಪ್ರಯತ್ನಿಸುತ್ತಿರುವುದು ಕ್ರಾಂತಿಯ ಗಮನಕ್ಕೆ ಬಂತು. ಅಣ್ಣನ ಭೇಟಿ ಮುಂದಕ್ಕೆ ಹೋದಾಗ, ಸಿಂಧೂ ಮೆನನ್‌ಳನ್ನು ಭೇಟಿಯಾಗುವ ಆಸೆ ತೀವ್ರಗೊಳ್ಳುತ್ತಾ ಹೋಯಿತು. ಅದೇ ಸಮಯಕ್ಕೆ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಕೊಚ್ಚಿನ್‌ನಲ್ಲಿನ ಕೆ.ಎಮ್. ನಯ್ಯಾರ್ ಒಡೆತನದ ಅಪಾರ್ಟ್‌ಮೆಂಟ್‌ಗಳನ್ನು ನೆಲಸಮ ಮಾಡಿದ ಸುದ್ದಿ ತಲುಪಿತು. ಈ ಎಲ್ಲ ಒತ್ತಡಗಳಿಂದ ತಪ್ಪಿಸಿಕೊಳ್ಳುವವನಂತೆ ಕ್ರಾಂತಿ ಮಸ್ಸೂರಿಯ ದಾರಿ ಹಿಡಿದ; ತನ್ನ ಮನಸ್ಸಿನಲ್ಲಿ ಮೋಹನ ಮುರಲಿ ನುಡಿಸುತ್ತಿದ್ದ ಸಿಂಧೂ ಮೆನನ್‌ಳನ್ನು ಕಾಣಲಿಕ್ಕೆ. ಅಲ್ಲಿ ಆತನಿಗೆ ಅದ್ಭುತ ಆತಿಥ್ಯ ಎದುರಾಯಿತು.

ಭಾಗ–21

ವಿಮಾನದಲ್ಲಿ ಕಿಟಕಿಯ ಪಕ್ಕದ ನನ್ನ ಸೀಟಿನಲ್ಲಿ ಕುಳಿತಿದ್ದೆ. ಸಿಂಧು ಮೆನನ್ ನನ್ನ ಪಕ್ಕ ಕುಳಿತಿದ್ದಳು. 'ಕಿಟಕಿಯ ಪಕ್ಕ ಕೂರುತ್ತೀಯಾ...' ಕೇಳಿದ್ದೆ. ಏಕೆಂದರೆ ಕಿಟಕಿಯ ಪಕ್ಕ ಕೂರಲು ಸಾಮಾನ್ಯವಾಗಿ ಪ್ರತಿಯೊಬ್ಬರೂ ಇಷ್ಟಪಡುತ್ತಾರೆ. 'ಬೇಡ, ಆ್ಯಕ್ಚುಯಲಿ, ನನಗೆ ವಿಮಾನ ಯಾನ ಎಂದರೆ ಪಂಚಪ್ರಾಣ. ಹಕ್ಕಿಯಂತೆ ಆಕಾಶದಲ್ಲಿ ಸಂಭ್ರಮದಿಂದ ಹಾರಿ ನಲಿದಾಡಬೇಕೆನ್ನುವ ಅಪರಿಮಿತ ಬಯಕೆ ಕೂಡ. ಬಟ್ ಐಯ್ಯಾಮ್ ಸಫರಿಂಗ್ ಫ್ರಮ್ **Avio phobia.** ಆದ್ದರಿಂದಲೇ ಸಾಮಾನ್ಯವಾಗಿ ಸಿಂಗಲ್ ಆಗಿ ಫ್ಲೈಟ್ ಜರ್ನಿ ಮಾಡೋದಿಲ್ಲ. ಅಂಥ ಅನಿವಾರ್ಯ ಬಂದಾಗ ವಿಂಡೊ ಪಕ್ಕ ಸೀಟ್ ರಿಸರ್ವ್ ಮಾಡಿಸೊಲ್ಲ. ಇಂಟರೆಸ್ಟಿಂಗ್ ಸಂಗತಿ ಎಂದರೆ ಫ್ಲೈಟ್ ಇಳಿದ ತಕ್ಷಣ ಒಂಥರಾ ರಿಲ್ಯಾಕ್ಸ್ ಆಗಿ ಮತ್ತೆ ಫ್ಲೈಟ್ ಹತ್ತೋಣ ಎಂಬ ಟೆಂಪ್ಟೇಶನ್ ಶುರುವಾಗುತ್ತದೆ. ಫ್ಲೈಟ್ ಟೇಕಾಫ್ ಆಗುವಾಗ ಮತ್ತು ಲ್ಯಾಂಡ್ ಆಗುವಾಗ ಕಣ್ಮುಚ್ಚಿ ದೇವರ ಧ್ಯಾನದಲ್ಲಿ ಮುಳುಗಿಬಿಡುತ್ತೀನಿ. ಅಂದಹಾಗೆ ದೇವರು ಅನ್ನುವವನು ಇದ್ದಾನಾ? ಇದ್ದರೆ ಜಗತ್ತಿನ ಎಲ್ಲಾ ಮನುಷ್ಯರನ್ನೂ ಏಕೆ ಸಮನಾಗಿ ನೋಡುವುದಿಲ್ಲ?' — ಸಿಂಧು ಮೆನನ್ ತನ್ನ ಅಂಗೈಯಲ್ಲಿ ನನ್ನ ಮುಂಗೈಯನ್ನು ಮೃದುವಾಗಿ ಅಮುಕುತ್ತಾ ಕೇಳಿದ್ದಳು. ಅಪ್ಪ ಸತ್ತಿರುವ ದುಃಖದ ತೀವ್ರತೆ ಅವಳಲ್ಲಿ ಕಡಿಮೆಯಾಗಿತ್ತು. ಸುಂದರವಾಗಿರುವವರು ನಗು, ಅಳು ಎರಡೂ ಸಂದರ್ಭಗಳಲ್ಲೂ ಸುಂದರವಾಗಿಯೇ ಕಾಣುತ್ತಾರೆ.

ಫ್ಲೈಟ್ ಟೇಕಾಫ್ ಆಗುವ ಸೂಚನೆ ಸಿಗುತ್ತಿದ್ದಂತೆ ಸಿಂಧು ಮೆನನ್ ಮೆಲ್ಲನೆ ನನ್ನ ತೋಳಿನ ಮೇಲೆ ತಲೆ ವಾಲಿಸಿ ಕಣ್ಮುಚ್ಚಿದ್ದಳು. ನನ್ನ ತೋಳಿಗೆ ತಾಕುತ್ತಿದ್ದ ಅವಳ ಉಸಿರಿನ ಲಯದಿಂದಲೇ ಅವಳ ಆತಂಕ ನನ್ನ ನರನಾಡಿಗಳಿಗೆ ಅರಿವಾಗುತ್ತಿತ್ತು. ವಿಮಾನ ಈಗ ಟೇಕಾಫ್ ಕ್ರಿಯೆಯನ್ನು ಮುಗಿಸಿ ಸಂಪೂರ್ಣವಾಗಿ ಆಗಸದಲ್ಲಿ ತೇಲುತ್ತಿದ್ದರೂ ಮನೆಯೊಂದರಲ್ಲಿ ಕೂತಿರುವಂತೆ ಅರಿವಾಗತೊಡಗಿತ್ತು. ಗಗನಸಖಿಯರು ಪ್ರಯಾಣಿಕರಿಗೆ ತಿನ್ನಲು ಆಹಾರದ ಪೊಟ್ಟಣಗಳನ್ನು ವಿತರಿಸಲು ಶುರುವಿಟ್ಟುಕೊಂಡಿದ್ದರು. ಸ್ಯಾಂಡ್‌ವಿಚ್ ಹಾಗೂ ಚಹಾ ಮುಗಿಸಿದ ನಂತರ 'ನಾನು ಕೇಳಿದ ಪ್ರಶ್ನೆಗೆ ನೀವಿನ್ನೂ ಉತ್ತರಿಸಲಿಲ್ಲ...' ನನ್ನ ಕಡೆ ನೋಡಿ ಪ್ರಶ್ನಿಸಿದವಳ ಮುಖದಲ್ಲಿನ ಕೆಂಪನೆಯ ಕೆನ್ನೆಗಳು ಕುಳಿ ಬಿದ್ದು ತಾವರೆಯ ಹೂವಿನಂತೆ ಅರಳಿದ್ದವು. ಅವಳ ಕುಳಿಬಿದ್ದ ಕೆನ್ನೆಗಳ ಸುಳಿಯಲ್ಲಿ ನನ್ನ ಮನಸ್ಸು ಕ್ಷಣ ಮುಳುಗಿದ್ದರಿಂದಾಗಿ ಅವಳ ಪ್ರಶ್ನೆಯನ್ನು ಮರೆತು 'ಏನು ನೀನು ಕೇಳಿದ ಪ್ರಶ್ನೆ' ಎಂದು ಮರುಪ್ರಶ್ನಿಸಿದ್ದೆ. 'ಓಹ್, ಎಂಥ ಮರೆವು ನಿಮ್ಮದು, ನಿಮಗೆ ಲೈಟಾಗಿ ಪಾರ್ಶಿಯಲ್ ಅಮ್ನೇಶಿಯ ಏನಾದರೂ ಅಟ್ಯಾಕ್ ಆಗಿದೆಯಾ?' ನಗುತ್ತಾ ಹೇಳಿದ್ದಳು. ನಗುವಿನೊಂದಿಗೆ ಅವಳ ಕೆನ್ನೆಗಳು ಮತ್ತಷ್ಟು ಕುಳಿಬಿದ್ದು ಇನ್ನಷ್ಟು ಅಂದವನ್ನು ಹೆಚ್ಚಿಸಿಕೊಂಡಿದ್ದವು.

'ಹೌದು, ನಿನ್ನಂಥ ಸುಂದರಿಯ ಪಕ್ಕದಲ್ಲಿ ಕುಳಿತವರಿಗೆ ಬೇರೆಲ್ಲಾ ಮರೆತು ಹೋಗುವುದು ಸಹಜವೇ ಇರಬೇಕು. ಮನಸ್ಸು ಹಾರಿಹೋದಾಗ ಮೆದುಳು ನಿಜಕ್ಕೂ ಗೊಂದಲದಲ್ಲಿ ಬಿದ್ದು ಒದ್ದಾಡುವಾಗ ನೆನಪಿನ ಶಕ್ತಿಗೆ ಒಂದಿಷ್ಟು ಶಾಕ್ ಆಗಿಯೇ ಆಗುತ್ತದೆ...' ನಾನೂ ತಮಾಷೆಯಾಗಿಯೇ ಉತ್ತರಿಸಿದ್ದೆ.

ನನ್ನ ಅಣ್ಣ ವಿಕ್ರಂ ರೆಡ್ಡಿ ಸತ್ತು ಹೋಗಿರುವ ವಿಷಯವನ್ನು ಕೂಡ ನಿರ್ಲಕ್ಷಿಸಿ ನಾನು ಇವಳೊಂದಿಗೆ ಪ್ರಯಾಣ ಮಾಡುತ್ತಿರುವುದರ ಹಿಂದೆ ಮನಸ್ಸು ಮತ್ತು ದೇಹಗಳ ಇನ್ನೆಂಥ ಘನವಾದ ಹುನ್ನಾರ ಅಡಗಿರಬೇಕು. ಅಥವಾ ಅಣ್ಣ ವಿಕ್ರಂ ರೆಡ್ಡಿ ಮತ್ತು ನಾನು ಒಂದೇ ತಂದೆಯ ರಕ್ತ ಹಂಚಿಕೊಂಡಿದ್ದರೂ ತಾಯಿಯ ಗರ್ಭಗಳು ಬೇರೆ ಬೇರೆ ಆಗಿರುವುದರಿಂದ ಈ ರೀತಿಯ ಸಂವೇದನಾರಹಿತ ವಲಯದಲ್ಲಿ ನಾನು ನಿಲ್ಲಲು ಸಾಧ್ಯವಾಗಿರಬಹುದೆ? ಹಾಗಾದರೆ ಸಿಂಧು ಮೆನನ್ ಹಿಂದೆ ಬಂದುಬಿಡಲು ನನ್ನನ್ನು ಪ್ರೇರೇಪಿಸಿದ ಬಯೋಲಾಜಿಕಲ್ ಫೋರ್ಸ್ ಆದರೂ ಏನಿರಬಹುದು ಎಂದು ಆಲೋಚನೆಗೆ ಬಿದ್ದವನಿಗೆ, 'ಅದೇ ದೇವರು ಇದ್ದಾನ? ಎಂದು ಕೇಳಿದ್ದೆ ನಾನು, ವಿಮಾನ ಟೇಕಾಫ್ ಆಗುವುದಕ್ಕೂ ಮುಂಚೆ...' ಎಂದು ಕಿವಿಯ ಹತ್ತಿರ ಮುಖವಿಟ್ಟು ಕೇಳಿದ್ದಳು.

ವಿಮಾನದಲ್ಲಿ ಪ್ರಯಾಣಿಸುತ್ತಿರುವೆನೆಂಬ ಸಂಗತಿಯನ್ನೇ ಮರೆತಿದ್ದ ನಾನು, 'ಓಹ್, ಎಂಥ ಪ್ರಶ್ನೆ. ನಾವೀಗ ವಿಮಾನದಲ್ಲಿ ಪ್ರಯಾಣಿಸುತ್ತಿರುವ ಸಂಗತಿಯೇ ಒಂದು ವಿಸ್ಮಯ. ಒಂದು ಸೋಲಾರ್ ಸಿಸ್ಟಮ್‌ನಲ್ಲಿ ಸೂರ್ಯನೊಟ್ಟಿಗೆ ಎಣಿಸಲಾರದಷ್ಟು ನಕ್ಷತ್ರ ಪುಂಜಗಳಿರುತ್ತವಂತೆ. ಇಂಥ ಒಂದು ಸೋಲಾರ್ ಸಿಸ್ಟಮ್ ಹರಡಿಕೊಳ್ಳಲೇ **infinite space** ಬೇಕಾಗುತ್ತದೆ. ಇಂಥ ಸೋಲಾರ್ ಸಿಸ್ಟಮ್ ಯೂನಿವರ್ಸ್‌ನಲ್ಲಿ ಬಿಲಿಯನ್‌ಗಟ್ಟಲೆ ಇವೆಯಂತೆ. ಇತ್ತೀಚಿನ ಒಂದು ಸಂಶೋಧನೆ ಪ್ರಕಾರ ಲೆಕ್ಕವಿಲ್ಲದಷ್ಟು ಯೂನಿವರ್ಸ್‌ಗಳ ಅಸ್ತಿತ್ವ ಕೂಡ ಇದೆಯಂತೆ. ಮತ್ತು ಯೂನಿವರ್ಸ್‌ಗಳಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಗ್ರಹ, ನಕ್ಷತ್ರಗಳೂ ಕೂಡ ಒಂದನ್ನೊಂದು ಎಡತಾಕದೆ ಪ್ರತಿಕ್ಷಣ ತಿರುಗುತ್ತಿವೆಯೆಂದರೆ... ಅಬ್ಬಾ! ನಾವಿರುವ ಭೂಮಿಯೇ ಸೂರ್ಯನ ಸುತ್ತಲೂ ತನ್ನ ಕಕ್ಷೆಯಲ್ಲಿ ಗಂಟೆಗೆ ಸುಮಾರು ಸಾವಿರ ಕಿಲೋಮೀಟರ್ ವೇಗದಲ್ಲಿ ಚಲಿಸುತ್ತಿದೆಯಂತೆ. ಇದೆಲ್ಲ ಯಾವಾಗ ಸೃಷ್ಟಿಯಾಯಿತೋ, ಹೇಗೆ ಸೃಷ್ಟಿಯಾಯಿತೋ... ನಾವು ಮಾತ್ರ ಭೂಮಿಯ ಮೇಲೆ ಈ ಯಾವುದರ ಪರಿವೂ ಇಲ್ಲದೆ ಬದುಕುತ್ತಿರುತ್ತೇವೆ. ಅದೇ ದೇವರು. ದೇವರು ಎಂದರೆ ಭಯ, ದೇವರು ಎಂದರೆ ಧೈರ್ಯ, ದೇವರು ಎಂದರೆ ನಂಬಿಕೆ, ದೇವರು ಎಂದರೆ ನೋಡಲು ಸಿಗದೇ ಇರುವುದು'.

ಜಿಜ್ಞಾಸೆಗೆ ಬಿದ್ದವನಂತೆ ಹೇಳಿದ್ದೆ. ನಿಜವಾಗಿಯೂ ನನಗೆ ಖಗೋಳಶಾಸ್ತ್ರದ ಬಗ್ಗೆ ಅಪರಿಮಿತವಾದ ಆಸಕ್ತಿ ಇತ್ತು. ನನ್ನ ಹರೆಯದಲ್ಲಿ ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲೂ ಆಕಾಶ ವಿಪರೀತವಾಗಿ ನನ್ನನ್ನು ಸೆಳೆಯುತ್ತಿತ್ತು. ರಾತ್ರಿಗಳಲ್ಲಂತೂ ಕೆಲವೊಮ್ಮೆ ನಕ್ಷತ್ರ ರಾಶಿಗಳಲ್ಲಿ ಲೀನವಾಗಿಬಿಡುತ್ತಿದ್ದೆ. ಆ ಬಗ್ಗೆ ಅಧ್ಯಯನ ಮಾಡುತ್ತೇನೆಂದಾಗ ಅಪ್ಪ ಗಂಭೀರವಾಗಿಯೇ 'ಬುದ್ಧಿ ತಿಳಿದಾಗಿನಿಂದಲೂ ಇದುವರೆಗೂ ಎಂಥೆಂಥ ಸಂಶೋಧನೆಗಳನ್ನು ಕೈಗೊಂಡರೂ ಮನುಷ್ಯ ಭೂಮಿಯನ್ನೇ ಅಂಗುಲದಷ್ಟು ತಿಳಿದುಕೊಳ್ಳಲಾಗಿಲ್ಲ. ಅಂತಹುದರಲ್ಲಿ ನೀನು ಖಗೋಳದ ಬಗ್ಗೆ ಅಧ್ಯಯನ ಮಾಡ್ತೀನಿ ಅಂತ ಹೇಳ್ತಾ ಇದೀಯಲ್ಲ. ಆಕಾಶದ ಬಗ್ಗೆ ತಿಳಿದುಕೊಳ್ಳೋಕೆ ಹೋದ್ರೆ ಖಂಡಿತವಾಗಿಯೂ ತಲೆ ಕೆಡ್ತದೆ. ಅದನ್ನೆಲ್ಲ ನೋಡ್ಕೊಳ್ಳೋಕೆ ದೇವ್ರು ಅಂತ ಒಬ್ಬ ಇದಾನೆ. ಊಟ ಬಟ್ಟೆಗೆ ನೆರವಾಗೋ ವಿದ್ಯೆ ಕಲಿತುಕೊಂಡು ನೆಮ್ಮದಿಯಾಗಿ ಇರೋದನ್ನ